Minor Tanks in Virupakshapura Hobli.

Q.—10. Sri S. KARIAPPA (Virupakshapura).—

Will the Government be pleased to state :—

(*a*) the names of minor tanks in Virupakshapura Hobli that have been restored during the past five years ;

(*b*) the names of minor tanks which have been proposed to be improved and the nature of the proposed inprovement ?

A.—Sri H. M. CHANNABASAPPA (Minister for Industries).—

(*a*) 1 Hosahalli tank.
2 Bandur Valagenahalli tank.
3 Ankesanahalli tank.
4 Aralasandra Rayanakere.
5 Agrahara Volagerahallikere.

(*b*) Only repairs are contemplated in the following cases :—

1 Sooleri tank—Urgent repairs to sluice.
2 Sogala tank—Urgent repairs to sluice.
3 Horakuppe tank—Repairs to sluice and waste weir.
4 Bunagunahalli tank—Urgent repairs to sluice.
5 Akkur tank—Urgent repairs to sluice.
6 Managundanahalli Makhikunte—Urgent repairs to sluice.

ಶ್ರೀ ಎಸ್. ಕರಿಯಪ್ಪ.—ಸೋಗ್ಗರಿಕೆರೆಗೆ ತೂಬನ್ನು ರಿಪೇರಿ ಮಾಡಿಕೊಡಬೇಕೆಂದು ಐದಾರು ವರ್ಷಗಳಿಂದ ಕೇಳುತ್ತಿದ್ದಾರೆ ಅಲ್ಲವೆ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕೋಸ್ಕರವಾಗಿ ಅಂದಾಜು ತಯಾರಾಗಿದೆ.

ಶ್ರೀ ಎಸ್. ಕರಿಯಪ್ಪ.—ಹಾಗಾದರೆ ಇಷ್ಟೊಂದು ಕಾಲ ನಿಧಾನ ಮಾಡುವುದಕ್ಕೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾತಕ್ಕೋಸ್ಕರ ನಿಧಾನವಾಯಿತು ಎನ್ನುವುದು ಗೊತ್ತಿಲ್ಲ. ಈಗ ಅಂದಾಜು ತಯಾರು ಮಾಡಿಸಿದ್ದೇವೆ. ಕೆಲಸ ಮಾಡಿಸಿ ಕೊಡುತ್ತೇವೆ.

ಶ್ರೀ ಎಸ್. ಕರಿಯಪ್ಪ.—ಹಾಗೆಯೇ, ಸೋಗ್ಗಾಲ, ಹೊರಕುಪ್ಪೆ, ಬುನಗನಹಳ್ಳಿ. ಅಕ್ಕೂರು ಈ ಕೆರೆಗಳ ತೂಬು ಕೂಡ ಹೋಗಿದೆ. ಇವುಗಳನ್ನೂ ಕೂಡ ರಿಪೇರಿ ಮಾಡಿಸಿಕೊಡಲು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ರಿಪೇರಿ ಮಾಡಬೇಕೆಂಬ ಉದ್ದೇಶದಿಂದ ಸೋಗ್ಗಾಲ ಕೆರೆಗೆ 1500 ರೂಪಾಯಿಗಳ, ಹೊರಕುಪ್ಪೆಗೆ 1,650 ರೂಪಾಯಿಗಳ ಬುನಗುನಹಳ್ಳಿ ಕೆರೆಗೆ 4,700 ರೂಪಾಯಿಗಳ, ಅಕ್ಕೂರು ಕೆರೆಗೆ 1,120 ರೂಪಾಯಿಗಳ, ಮನಗುಂಡನ ಹಳ್ಳಿ ಮುಖ್ಯ ಕುಂಟೆಗೆ 2,800 ರೂಪಾಯಿಗಳ ಅಂದಾಜು ತಯಾರಾಗಿ sanction stageನಲ್ಲಿದೆ. ಕೆಲಸ ಮಾಡಿಸಿಕೊಡುತ್ತೇವೆ.

ಶ್ರೀ ಎಸ್. ಕರಿಯಪ್ಪ.—ಹೀಗೆ ನಿಧಾನ ಮಾಡತಕ್ಕ ಪದ್ಧತಿ ಸರಿಯಲ್ಲವೆನ್ನುವುದನ್ನು ಒಪ್ಪುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಾಧ್ಯವಾದಷ್ಟೂ ನಿಧಾನ ಮಾಡಕೂಡದು ಎನ್ನುವುದೇ ಸರ್ಕಾರದ ಆಶಯ.

Padavala Nerelakere Tank, Nagamangala Taluk.

Q.—213. Sri K. SINGARI GOWDA (Nagamangala).—

Will the Government be pleased to state :—

(*a*) when Padavala Neralakere tank in Nagamangala Taluk was sanctioned and the work was taken up ;

(*b*) whether the work has been completed ?

A.—Sri H. M. CHANNABASAPPA (Minister for Industries).—

(*a*) An estimate for the work was sanctioned during October 1944 and the work taken up during April 1945.

(*b*) The work is almost complete.

ಶ್ರೀ ಕೆ. ಸಿಂಗಾರಿಗೌಡ.—ಈ ಕಾಮಗಾರಿಯ ಅಂದಾಜು ಮೊಬಲಗು ಎಷ್ಟು ?

*ಶ್ರೀ ಎಚ್. ಎಂ. ಚನ್ನಬಸಪ್ಪ.—28,000 ರೂಪಾಯಿ.

ಶ್ರೀ ಕೆ. ಸಿಂಗಾರಿಗೌಡ.—ಕಳೆದ 11 ವರ್ಷಗಳಿಂದ ಈ ಕೆಲಸ ನಡೆಯುತ್ತ ಇರುವುದಕ್ಕೆ ಪ್ರಬಲವಾದ ಕಾರಣಗಳೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೊದಲು ಅಂದಾಜು ತಯಾರಾಗಿ, ಮಂಜೂರಾದ ಮೇಲೆ ಕಂಟ್ರಾಕ್ಟರು ಕೆಲಸಕ್ಕೆ ಪ್ರಾರಂಭ ಮಾಡಿ ರೇಟುಗಳು ಕಡಿಮೆ ಎಂದು ನಿಲ್ಲಿಸಿದರು. ಆಮೇಲೆ ಪುನಃ ಅಂದಾಜು ಆಗಿ ಬೇರೆ ಕಂಟ್ರಾಕ್ಟರಿಗೆ ವಹಿಸಲಾಯಿತು. ಆ ಕಂಟ್ರಾಕ್ಟರು ಸಹ ಅರ್ಧ ಕೆಲಸ ಮಾಡಿ ನಂತರ ನಿಲ್ಲಿಸಿಬಿಟ್ಟರು. ಈ ಮುಖ್ಯ ಮಳೆ ಮತ್ತು ಇತರ ಕಾರಣಗಳಿಂದ ತೊಂದರೆಗಳಾದವು. ಹೀಗಾಗಿ ಈ ಕೆಲಸ ಬಹಳ ನಿಧಾನವಾಗಲು ಕಾರಣವಾಯಿತು.

ಶ್ರೀ ಕೆ. ಸಿಂಗಾರಿಗೌಡ.—ಈ ಕೆಲಸ ಪೂರ್ತಿಯಾಗುವುದಕ್ಕೆ ಇನ್ನೆಷ್ಟು ದಿವಸಗಳ ಕಾಲ ಬೇಕು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಕೆಲಸ ಮುಗಿಯುವುದಕ್ಕೆ ಬಂದಿದೆ. ತಮಗೆ ಗೊತ್ತಿರುವ ಹಾಗೆ 23 ಸಾವಿರ ರೂಪಾಯಿ ಖರ್ಚಾಗಿದೆ. ಇನ್ನು 5 ಸಾವಿರ ರೂಪಾಯಿ ಕೆಲಸ ಮಾತ್ರ ಉಳಿದಿದೆ. ಅದನ್ನು ಈ ವರ್ಷ ಮಾಡುತ್ತೇವೆ.

ಶ್ರೀ ಕೆ. ಪ್ರಭಾಕರ್.—ಕೆಲಸದ ಮಧ್ಯೆ ರೇಟ್ ಕಡಿಮೆ ಎಂದು ಕೆಲಸ ನಿಲ್ಲಿಸಿದರು ಎಂದು ಹೇಳಿದಿರಿ.